ಶ್ರೀ ಜಿ. ಬಿ. ಶಂಕರರಾವ್.—ಸ್ವಾಮಿ, ಈ ಆಹಾರಧಾನ್ಯಗಳಲ್ಲದೇ ಈ ಕೃಷಿ ಉತ್ಪನ್ನಗಳು ಏನೇನಿವೆ ಇವೆಲ್ಲಕ್ಕೂ ಒಂದು ಬೆಲೆಯನ್ನು ನಿಗದಿ ಮಾಡುವಂಥ ವಿಚಾರ ಸರ್ಕಾರಕ್ಕೆ ಇದೆ ಎಂದು ಹೇಳಿದ್ದೀರಿ. ನಮ್ಮಲ್ಲಿ ನಾನಾ ಉತ್ಪನ್ನಗಳೂ ಉಂಟು, ಹಾಗೆಯೇ ನಾನಾ ಆಹಾರಧಾನ್ಯಗಳೂ ಉಂಟು ; ಹಾಗೆಯೇ ಅವುಗಳಿಗೆ ನಾನಾ ಬೆಲೆಗಳು ಉಂಟು. ವಿಶೇಷವಾಗಿ ಈ ಆಹಾರ ಧಾನ್ಯಗಳು ಸುಗ್ಗಿಯ ಪೂರ್ವದಲ್ಲಿ ಮತ್ತು ವ್ಯಾಪಾರಸ್ಥರಿಗೆ ಸೇರುವಂಥ ಪೂರ್ವದಲ್ಲಿ ಈ ನಾನಾ ಬೆಲೆ ಏರಿಂದಾಗಿ ಬಡವರಿಗೆ ನಷ್ಟವಾಗುತ್ತಿದೆ ಮತ್ತು ಕಂಸ್ಯೂಮರ್ಸ್ ಅದನ್ನು ಉಪಯೋಗಿಸುವುದೂ ಕೂಡ ಕಷ್ಟವಾಗುತ್ತದೆ. ಆದ್ದರಿಂದ ಈ ಆಹಾರ ಧಾನ್ಯಗಳ ಬೆಲೆಗಳನ್ನು ಸುಗ್ಗಿಯ ಪೂರ್ವದಲ್ಲಿ ನಿಗದಿ ಮಾಡುವುದಕ್ಕೆ ಒಂದು ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್,—ಬತ್ತಕ್ಕೆ ಬೆಲೆ ನಿಗದಿ ಮಾಡಿದ್ದೇವೆ. ಜೋಳ, ರಾಗಿಗೂ ಬೆಲೆಯನ್ನು ನಿಗದಿ ಮಾಡಿದ್ದೇವೆ. ಮತ್ತೆ ಈ ಹೈಬ್ರಿಡ್ ಜವಾರ್ ಒಂದಕ್ಕೆ ಬೆಲೆ ನಿಗದಿ ಮಾಡುವುದು ಸ್ವಲ್ಪ ನಿಧಾನವಾಗಿದೆ ಅಷ್ಟೆ. ಬಾಕಿ ಆಹಾರಧಾನ್ಯಗಳ ಬೆಲೆಗಳನ್ನು ಮುಂಚಿತವಾಗಿ ನಿಗದಿ ಮಾಡಿದ್ದೇವೆ.

ಶ್ರೀ ಜಿ. ಉಪನಾಳ್.—ಸ್ವಾಮಿ. ವರಲಕ್ಷ್ಮಿ ಹತ್ತಿಗೆ ಒಂದು ಬೆಲೆ ನಿಗದಿ ಮಾಡುವ ಬಗ್ಗೆ ಹಿಂದೆ ಆಶ್ವಾಸನೆ ಕೊಟ್ಟಿದ್ದೀರಿ. ಆದರ ಬಗ್ಗೆ ಏನಾಯಿತು ಎಂಬುದು ನಮಗೆ ತಿಳಿಯಲಿಲ್ಲ ದಯಮಾಡಿ ಆ ಬಗ್ಗೆ ಕ್ಲಿಯರ್ ಆಗಿ ಹೇಳಬೇಕು.

ಶ್ರೀ ಕೆ. ಎಚ್. ರಂಗನಾಥ್.—ಇದು ವರಲಕ್ಷ್ಮಿಗೆ ಸಂಬಂಧಪಟ್ಟಿದ್ದಲ್ಲ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಕೆಲವು ಧಾನ್ಯಗಳ ಬೆಲೆಗಳು ಇಳಿದಿವೆ, ಕೆಲವು ಧಾನ್ಯಗಳ ಬೆಲೆಗಳು ಏರಿವೆ ಎಂಬುದನ್ನು ಮಾನ್ಯ ಮಂತ್ರಿಯವರೂ ಒಪ್ಪಿಕೊಳ್ಳುತ್ತಾರೆ. ನಾನು ಕೇಳುತ್ತೇನೆ ಸರ್ಕಾರ ದವರು ಪ್ರತಿ ವರ್ಷ ಕಾಸ್ಟ್ ಆಫ್ ಪ್ರೊಡಕ್ಷನ್ ಏನಾಗುತ್ತದೆ ಎಂಬುದನ್ನು ತಿಳಿದುಕೊಂಡು ಒಂದು ಬೆಲೆ ನಿಗದಿ ಮಾಡಿ ಅದನ್ನು ಪಬ್ಲಿಷ್ ಮಾಡಿದ ಮೇಲೆ ಅದು ಪುನಃ ಕಡಿಮೆ ಬೀಳತಕ್ಕಂಥ ಸಂದರ್ಭದಲ್ಲಿ ಅವರಿಗೆ ಶಕ್ತಿ ಇದ್ದರೆ ಅವರೇ ಒಂದು ಬೆಲೆ ನಿಗದಿ ಮಾಡಲಿ. ಇಲ್ಲವಿದ್ದರೆ ಕೇಂದ್ರ ಸರ್ಕಾರದವರ ಸಹಾಯವನ್ನು ಪಡೆದು ಸಬ್ಸಿಡಿ ರೂಪದಲ್ಲಿ ರೈತರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಮೊದಲನೆಯ ಭಾಗದ ಸಲಹೆ ಇದೆಯಲ್ಲ. ಕಾಸ್ಟ್ ಆಫ್ ಪ್ರೊಡಕ್ಷನ್ ಮೇಲೆ ಬೆಲೆ ನಿಗದಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿರುವುದು ಅದು ಯೋಗ್ಯವಾದ ಸಲಹೆ ಇದೆ. ಆದರೆ ಸಬ್ಸಿಡೈಸ್ಡ್ ಮಾಡತಕ್ಕಂಥಾದ್ದಕ್ಕೆ ನಾನು ಉತ್ತರ ಹೇಳುವುದಕ್ಕೆ ತಯಾರು ಇಲ್ಲ.

Cases pending before Buntwal Taluk Land Tribunals

311. SRI B. V. KAKKILAYA (Vittal).—Will the Minister eror Revenue be pleased to state :—

(a) the number of cases under Section 48A pending before Buntwal Taluk Land Tribunal and Buntwal Taluk Additional Land Tribunal as on 1st April 1978 ;

(b) the number of cases disposed of in each month after 1st April 1978 upto 31st October 1978 by each of the Tribunals ;

(c) the number of sanctioned posts sanctioned under each category for these tribunals and the number of posts which are vacant ;

(d) the steps so far taken by the Government to fill up the vacant posts ?

SRI B. BASAVALINGAPPA (Minister for Revenue).—

(a)—

Land Tribunal Buntwal	*Additional Land Tribunal, Buntwal*
8515	4381

(b)—

April	1978	Nil	Nil
May	,,	Nil	Nil
June	,,	21	9
July	,,	326	108
August	,,	765	534
Sept.	,,	652	500
Oct.	,,	389	448
Total		2153	1599

(c)—

		Posts Sanctioned	*Posts vacant*	*Posts Sanctioned*	*Posts vacant*
1.	Spl. Assistant Commissioner	1	...	1	...
2.	Spl. Tahsildar	1	...	1	1
3.	1st Gr. Revenue Inspectors	2	...	2	...
4.	1st Grade Surveyors	5	...	5	1
5.	1st Dn. Clerks	2	...	2	...
6.	2nd Dn. Clerks	3	...	3	...
7.	Kannada Typists	1	1	1	...
8.	Class IV Servants	9	3	9	...

(d) Action has been taken to fill up the post of the Special Tahsildar for the Additional Tribunal, Buntwal. The Superintendent of Land Records has been addressed by the Deputy Commissioner to fill up the posts of one 1st Grade Surveyor in the Additional Tribunal Buntwal and 3 Chairman in the Tribunal Buntwal. The Divisional Commissioner, Mysore has been addressed by the Deputy Commissioner to fill up the post of the typist in the Additional Tribunal Buntwal.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ. ತಮ್ಮ ಉತ್ತರದಲ್ಲಿ ಕೊಟ್ಟಿರತಕ್ಕಂಥ ವಿವರ ಬಹುತಃ ಹಿಂದೆ ಅಚ್ಚಾಗಿದ್ದುದ್ದು ಇರಬೇಕು ಎಂದು ಕಾಣುತ್ತದೆ, ಸ್ಪೆಷಲ್ ತಹಶೀಲ್ದಾರ್ (ಫರ್ಸ್ಟ್ ಗ್ರೇಡ್)ರ ಒಂದು ಪೋಸ್ಟ್ ವೇಕೆಂಟ್ ಇದೆ ಎಂದು ಹೇಳಿದ್ದೀರಿ. ಎರಡು ಪೋಸ್ಟ್ ವೇಕೆಂಟ್ ಇದೆ. ಬಂಟವಾಳ ತಾಲ್ಲೂಕಿನ ಎರಡು ಟ್ರಿಬ್ಯುನಲ್‌ಗಳಿಗೂ ಅವರನ್ನು ನೇಮಕ ಮಾಡಿಲ್ಲ. ಈ ಪೋಸ್ಟ್‌ಗಳನ್ನು ತಾವು ಈ ಕೂಡಲೇ ಭರ್ತಿ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ನಾವು ಅವರನ್ನು ಸೆಲೆಕ್ಟ್ ಮಾಡಿ ಕಳಿಸಿದ್ದೇವೆ. ಅವರು ಅಲ್ಲಿಗೆ ಹೋಗಿ ರಿಪೋರ್ಟ್ ಮಾಡಿಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಮೊನ್ನೆ ತನಕ ಒಬ್ಬರು ತಹಶೀಲ್ದಾರ್ ಇದ್ದರು, ೮-೧೦ ದಿವಸಗಳ ಹಿಂದೆ ಒಬ್ಬರನ್ನು ಅಲ್ಲಿಗೆ ಪೋಸ್ಟ್ ಮಾಡಿದ್ದೇವೆ. ಅವರೇನಾದರೂ ಅಲ್ಲಿಗೆ ಹಾಜರಾಗದಿದ್ದರೆ ಅದನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ತಮ್ಮ ಉತ್ತರದಲ್ಲಿ ಕೊಟ್ಟಿರುವ ಹಾಗೆ ೧೯೭೮ನೇ ಜೂನ್ ತಿಂಗಳಿನಿಂದ ಅಕ್ಟೋಬರ್ ತಿಂಗಳವರೆಗೆ ಟ್ರಿಬ್ಯುನಲ್‌ಗಳಲ್ಲಿ ಕ್ರಮವಾಗಿ ೩೨೬, ೭೬೫, ೬೫೨ ಹಾಗೂ ೩೮೯ ತುರ್ತು ಕಟ್ಟಲೆಗಳು ಮುಕ್ತಾಯಕ್ಕೆ ಬಂದಿವೆ. ಬಹಳಷ್ಟು ಕೆಲಸ ನಡೆದಿದೆ. ಆದರೆ ಅಲ್ಲಿರತಕ್ಕಂಥ ಇಬ್ಬರಲ್ಲೂ ಕೂಡ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದರು; ಅವರಲ್ಲಿ ಒಬ್ಬರು ರಿಟೈರ್ ಆಗಿದ್ದಾರೆ, ಇನ್ನೊಬ್ಬರು ಖಾಯಿಲೆ ಬಿದ್ದಿದ್ದಾರೆ. ಒಬ್ಬರು ಒಂದು ಟ್ರಿಬ್ಯುನಲ್‌ಗೆ ಮಾತ್ರ ಚೇರ್‌ಮನ್ ಆಗಿದ್ದಾರೆ. ಅವರು ಹೊಸಬರು. ಹೀಗಾಗಿ ೨ ತಿಂಗಳಿನಿಂದ ಕೆಲಸಗಳು ನಿಧಾನವಾಗುತ್ತಿದೆ. ಆದ್ದರಿಂದ ತಾವು ಇದನ್ನು ಪರಿಶೀಲನೆ ಮಾಡಿ ಅನುಭವಸ್ಥ ಅಧಿಕಾರಿಗಳನ್ನು ಈ ಎರಡೂ ಟ್ರಿಬ್ಯುನಲ್‌ಗಳಲ್ಲಿ ಹಾಕಿ ಈ ಕೆಲಸ ಸರಾಗವಾಗಿ ನಡೆಯುವುದಕ್ಕೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಎ. ಮೋಹಿದ್ದೀನ್.—ಸ್ವಾಮಿ. ಈ ಸಮಸ್ಯೆ ಇರುವುದು ಬಂಟವಾಳಕ್ಕೆ ಮಾತ್ರವಲ್ಲ ಇಡೀ ನಮ್ಮ ಜಿಲ್ಲೆಗೇ ಇದೆ. ಟ್ರಿಬ್ಯುನಲ್‌ಗಳಲ್ಲಿ ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳು ಖಾಲಿ ಇವೆ. ಸಾಕಷ್ಟು ಸಂಖ್ಯೆಯ ಅರ್ಜಿಗಳು ಇತ್ಯರ್ಥವಾಗದೇ ಇವೆ ಅಲ್ಲಿ ಹುದ್ದೆಗಳು ಖಾಲಿ ಇರುವುದರಿಂದ ಸಾಕಷ್ಟು ಸಂಖ್ಯೆಯ ಅರ್ಜಿಗಳನ್ನು ತೀರ್ಮಾನ ಮಾಡುವುದಕ್ಕೆ ತೊಂದರೆಯಾಗಿದೆ. ಎಲ್ಲೆಲ್ಲಿ ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳು ಖಾಲಿ ಇವೆ, ಎಲ್ಲೆಲ್ಲಿಗೆ ಸೂಪರ್‌ವೈಸರ್‌ಗಳು, ಸರ್ವೇಯರ್‌ಗಳು ಅಕಾಗಿದ್ದಾರೆ, ಭೂ ನ್ಯಾಯ ಮಂಡಳಿಗಳಿಗೆ ಯಾವ ಯಾವ ಸಿಬ್ಬಂದಿಗಳ ಅವಶ್ಯಕತೆ ಇದೆಯೋ ಸದನ್ನೆಲ್ಲಾ ಒಗ್ಗಿಸಿಕೊಟ್ಟು ಅತಿ ಶೀಘ್ರವಾಗಿ ಬಾಕಿ ಉಳಿದಿರುವಂಥ ಅರ್ಜಿಗಳನ್ನು ಇತ್ಯರ್ಥಗೊಳಿಸುವುದಕ್ಕೆ ಸಹಾಯ ಮಾಡುತ್ತೀರಾ ? ಖಾಲಿ ಇರುವಂಥ ಹುದ್ದೆಗಳನ್ನು ಆದಷ್ಟು ಶೀಘ್ರವಾಗಿ ಭರ್ತಿ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ :— ಅಸಿಸ್ಟೆಂಟ್ ಕಮೀಷನರ್ ಮತ್ತು ತಹಶೀಲ್ದಾರರ ಅಭಾವದಿಂದ ಆ ಕೆಲಸಗಳಲ್ಲಿ ಸ್ವಲ್ಪ ತಡವಾಗಿದೆ. ನಾವು ಎಲೆಲ್ಲಿ ಹುದ್ದೆಗಳು ಖಾಲಿ ಆಗಿವೆ ಅಲ್ಲಲ್ಲಿ ಅಧಿಕಾರಿಗಳನ್ನು ವರ್ಗ ಮಾಡಿದ್ದೇವೆ. ಈ ಅಭಾವ ಶೀಘ್ರದಲ್ಲೇ ಕೊನೇಯಾವೀತು ಎಂದು ನನ್ನ ಭಾವನೆ.

ಶ್ರೀ ಕೆ. ರಾಮಭಟ್ :— ಸ್ವಾಮಿ, ಅಸಿಸ್ಟೆಂಟ್ ಕಮಿಷನರ್ಸ್ ಮತ್ತು ತಹಶೀಲ್ದಾರಗಳು ಇಂತಹ ತಾರೀಖಿಗೆ ರಿಟೈರ್ ಆಗುತ್ತಾರೆ ಎಂದು ಕೆಲವು ಕಡೆಗಳಲ್ಲಿ ಗೊತ್ತಿರುತ್ತದೆ. ಅವರು ರಿಟೈರ್ ಆಗಿ ೩ ತಿಂಗಳಾಗಲು ಕಳೆದ ಮೇಲೆ ಆಲೋಚನೆ ಮಾಡಿ ಅಲ್ಲಿ ಅವರನ್ನು ನೇಮಕ ಮಾಡುತ್ತಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಕಡೆ ಅಧ್ಯಕ್ಷರುಗಳೇ ಇಲ್ಲ. ಇದರಿಂದ ಕೆಲಸಗಳು ನಿಧಾನವಾಗುತ್ತಿವೆ. ಆದ್ದರಿಂದ ನಾನು ಸಲಹೆ ಕೊಡುವುದೇನೆಂದರೆ ಅವರು ರಿಟೈರ್ ಆಗುವ ತಾರೀಖಿಗೆ ಮೊದಲೇ ಅವರನ್ನು ನೇಮಕ ಮಾಡುವ ವ್ಯವಸ್ಥೆ ಮಾಡಬೇಕು. ಇನ್ನೊಂದು ವಿಚಾರವೇನೆಂದರೆ ಟ್ರಿಬ್ಯುನಲ್‌ಗಳಿಗೆ ಸಾಕಷ್ಟು ಸಿಬ್ಬಂದಿವರ್ಗವವರನ್ನು. ಟೈಪಿಸ್ಟ್‌ರನ್ನ ಕೊಡುವುದಿಲ್ಲ. ನಮ್ಮ ಮಂಗಳೂರು, ಪುತ್ತೂರು ಗಳ ಎಗಡನೇ ಟ್ರಿಬ್ಯುನಲ್‌ಗಳಿಗೆ ಸಾಕಷ್ಟು ಸಿಬ್ಬಂದಿಯನ್ನು ಕೊಟ್ಟಿಲ್ಲ. ಈ ಕಾರಣದಿಂದ ತಾವು ಆದಷ್ಟು ಬೇಗನೆ ಈ ಕೆಲಸವನ್ನು ಮಾಡುತ್ತಿರೆಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ :— ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾವು ಅದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ.